

# ಮನಮೋಹಕ ಮಯೂರ ಪುಷ್ಪ



■ ಚಿತ್ರ-ಬರಹ: **ಮಂಜುನಾಥ ಡಿ.ಎಸ್.**

ಹತ್ತಿಪ್ಪತ್ತು ಅಡಿ ಎತ್ತರದ ಮರಗಳಲ್ಲಿ ಕಂಗೊಳಿಸುವ ಪ್ರಖರ ಹಸಿರೆಲೆಗಳ ಹಲವಾರು ಕವಲುಗರಿಗಳ ನಡುವೆ ಬೋಗುಣಿಯಾಕಾರದ ಪಂಚ ದಳಗಳ ಮನಮೋಹಕ ಮಯೂರ ಪುಷ್ಪಗಳು ಎದ್ದುಕಾಣುತ್ತವೆ. ನೀಳ ಕೇಸರಗಳು ಮತ್ತು ನಡುವಿನಿಂದ ಹೊರಹೊಮ್ಮುವ ಶಲಾಕೆಗಳನ್ನು ಹೊಂದಿರುವ ಎರಡಂಗುಲದ ಹೂಗಳು ನೇರ ಕಾಂಡಗಳಲ್ಲಿ ಗೊಂಚಲು ಗೊಂಚಲಾಗಿ ಅರಳಿ ಬಹುಮಜಲಿನ ಆರತಿ ದೀಪವನ್ನು ಹೋಲುತ್ತವೆ.

ಈ ಕುಸುಮಗಳು ಸಾಮಾನ್ಯವಾಗಿ ಕೆಂಬಣ್ಣದ್ದಾಗಿರುತ್ತವೆ. ಹಳದಿ ವರ್ಣದ ಹೂಗಳನ್ನು ಬಿಡುವ ಪ್ರಭೇದವೂ ಇದೆ. ಸುಮಾರು ಹತ್ತು ಅಂಗುಲದ ಕಂದು ಬಣ್ಣದ ಶಿಂಬೆಗಳು ಚಪ್ಪಟೆಯಾಕಾರ ಹೊಂದಿರುತ್ತವೆ.

ಈ ಸಸ್ಯ ಫಬಾಸಿಯೇ ಕುಟುಂಬಕ್ಕೆ ಸೇರಿದೆ. ಇಟಲಿಯ ಸಸ್ಯತಜ್ಞ ಆಂಡ್ರಿಯ ಸೆಸಲ್ಪಿನೋ ಗೌರವಾರ್ಥ ಈ ಸಸ್ಯಕ್ಕೆ ಸೆಸಲ್ಪಿನಿಯ ಪುಲ್ಚೆರಿಮ ಎಂದು ನಾಮಕರಣ ಮಾಡಲಾಗಿದೆ.

ಅತಿ ಸುಂದರ ಎಂಬುದು ಪುಲ್ಚೆರಿಮ ಪದದ ಅರ್ಥ. ಹೆಸರಿಗೆ ತಕ್ಕಂತೆ ಈ ಹೂಗಳು ನಿಜಕ್ಕೂ ಅತಿ ಸುಂದರ. ಆಕರ್ಷಕ ಆಕಾರ ಮತ್ತು ವರ್ಣದಿಂದಾಗಿ ಈ ಕುಸುಮವು ಮಯೂರ ಪುಷ್ಪ ಮತ್ತು ಸ್ವರ್ಗದ ಕೆಂಪು ಹಕ್ಕಿ ಎಂದು ಕರೆಯಲ್ಪಡುತ್ತದೆ.

ಬಾರ್ಬಡಾಸ್‌ನ ಹೆಮ್ಮೆ ಎಂದೂ ಗುರುತಿಸಲ್ಪಡುವ ಸೆಸಲ್ಪಿನಿಯ ಪುಲ್ಚೆರಿಮ ಕ್ಯಾರಿಬೇನಿಯನ್ ದ್ವೀಪದ ರಾಷ್ಟ್ರ ಪುಷ್ಪವೂ ಆಗಿದ್ದು ರಾಣಿಯ ಖಾಸಗೀ ಧ್ವಜದಲ್ಲಿ ಸ್ಥಾನ ಪಡೆದಿದೆ. ಭಾರತೀಯರು ಈ ಸಸ್ಯವನ್ನು ಕೃಷ್ಣಚೂರ, ರಾಧಾಚೂರ, ರತ್ನಗಂಧಿ, ಕೆಂಜಿಗೆ ಮೊದಲಾಗಿ ಕರೆಯುತ್ತಾರೆ.

ಈ ಗಿಡದ ಬೇರು, ತೊಗಟೆ, ಎಲೆ, ಮತ್ತು ಹೂಗಳನ್ನು ಸೆಳವು, ಅತಿಸಾರ, ಜಂತು, ಜ್ವರ, ಉಸಿರಾಟದ ತೊಂದರೆ ಇತ್ಯಾದಿ ಕಾಯಿಲೆಗಳನ್ನು ಗುಣಪಡಿಸುವ ನಾಟಿ ಔಷಧಿಗಳಲ್ಲಿ ಬಳಸುತ್ತಾರೆ. ■